

بسم اللهِ الرّحمٰنِ الرّحيم

# ಪ್ರಾರ್ಥನೆಯೊಂದಿಗೆ ಪ್ರಯತ್ನ ಮಾಡದಿರುವುದು ಅಲ್ಲಾಹನ ನಿಯಮಗಳ ಉಲ್ಲಂಘನೆಯಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **04–03–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಕೆಲವು ಜುಮುಅ ಖುತ್‌ಬಗಳಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ವಿವರಿಸಿದ್ದ ಕೆಲವು ವಿವರಣೆಗಳನ್ನೂ ಕೆಲವು ಗಾದೆಗಳನ್ನೂ ಕೆಲವು ನೀತಿ ಕಥೆಗಳನ್ನೂ ನಾನು ನಿಮ್ಮ ಮುಂದೆ ಪ್ರಸ್ತಾಪಿಸಿದ್ದೆ. ಈ ದಿನ ನಾನು ವಿವರಿಸಲು ನೀತಿಕಥೆಗಳನ್ನು ಆಯ್ಕೆಮಾಡಿದಾಗ ನಾನು ಹೀಗೆ ಯೋಚಿಸಿದೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಭಾರತ–ಪಾಕಿಸ್ಥಾನ ಉಪಖಂಡದ ಪುರಾತನ ಕಥೆಗಳನ್ನು ಮತ್ತು ಸಂಪ್ರದಾಯಗಳನ್ನು ವಿವರಿಸಿದ್ದಾರೆ. ಅವುಗಳು ಇಂದಿನ ತನಕ ನೆನಪಿನಲ್ಲಿ ಇರುವುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾರಣದಿಂದಾಗಿದೆ. ಇವುಗಳು ನಮ್ಮ ಜಮಾಅತಿನ ಸಾಹಿತ್ಯದಲ್ಲಿ ಪ್ರಸ್ತಾಪಿಸಲ್ಪಡದೆ ಇರುತ್ತಿದ್ದರೆ ಅವುಗಳು ಎಂದೋ ಕಣ್ಮರೆ ಯಾಗುತ್ತಿದ್ದುವು ಮತ್ತು ಆಧುನಿಕ ಕಾಲದಲ್ಲಿ ಅವುಗಳ ಬಗ್ಗೆ ಯಾರೂ ತಿಳಿಯುತ್ತಿರಲಿಲ್ಲ. ಅವುಗಳು ಕೇವಲ ಕಥೆಗಳಾಗಿರದೆ, ಕೆಲವು ವಾಸ್ತವಿಕ ಘಟನೆಗಳು ಸಹ ಪ್ರಸ್ತಾಪಿಸಲ್ಪಟ್ಟಿವೆ. ಅವುಗಳ ಮೂಲಕ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಉಪದೇಶಗಳನ್ನೂ ನೀಡಿದ್ದಾರೆ. ಕೆಲವು ಸಂದರ್ಭಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೆಲವು ಹಾಸ್ಯ ಕಥೆಗಳನ್ನೂ ಹೇಳಿದ್ದಾರೆ. ಆದರೆ ಅವುಗಳಲ್ಲಿ ಸಹ ನೀತಿಬೋಧೆ ಇರುತ್ತವೆ.

ಬಾಹ್ಯವಾಗಿ ನೋಡಿದರೆ ರಸಕಥೆಯಂತೆ ತೋರುವ ಒಂದನ್ನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯ ಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಬ್ಬ ತೋಟಗಾರಿಕೆ ಮಾಡುವ ಹೆಂಗಸಿನ ಉದಾಹರ ಣೆಯನ್ನು ಹೀಗೆ ನೀಡುತ್ತಿದ್ದರು. ಆಕೆಗೆ ಇಬ್ಬರು ಪುತ್ರಿಯರಿದ್ದರು. ಒಬ್ಬಾಕೆ ಕುಂಬಾರನನ್ನು ವಿವಾಹವಾಗಿದ್ದಳು. ಇನ್ನೊಬ್ಬಳು ತೋಟಗಾರಿಕೆ ಮಾಡುವವರ ಮನೆಗೆ ವಿವಾಹಿತಳಾಗಿ ಹೋಗಿದ್ದಳು. ಮಳೆ ಮೋಡ ದಟ್ಟವಾದಾಗ ತಾಯಿ ಗಾಬರಿಗೊಂಡು ಅತ್ತಿತ್ತ ಅಲೆದಾಡುತ್ತಿದ್ದಳು. ಜನರು ಆಕೆಯೊಂದಿಗೆ ಕೇಳಿದರು– ನಿನಗೇನಾಗಿದೆ? ಆಕೆ ಹೇಳುತ್ತಿದ್ದಳು ನನ್ನ ಒಬ್ಬಳು ಮಗಳ ಗತಿಗೆಟ್ಟಿತು. ಯಾಕೆಂದರೆ, ಒಂದು ವೇಳೆ ಮಳೆ ಸುರಿದರೆ ಕುಂಬಾರನ ಮನೆಗೆ ವಿವಾಹಿತೆಯಾಗಿ ಹೋದ ನನ್ನ ಮಗಳ ಗತಿ ಹಾಳಾಗುವುದು. ಅವರ ಮಡಿಕೆ ವ್ಯಾಪಾರ ಕೊನೆಗೊಳ್ಳುವುದು. ಆದರೆ ಮಳೆಯಾಗದಿದ್ದರೆ ತೋಟಗಾರಿಕೆ ಮಾಡುವವರ ಮನೆಗೆ ವಿವಾಹಿತಳಾಗಿ ಹೋದವಳ ಸ್ಥಿತಿ ಹಾಳಾಗುವುದು. ಅವರು ಬೆಳೆಯಿಸಲು ಉದ್ದೇಶಿಸಿದ ತರಕಾರಿ ಮೊದಲಾದುವು ಬೆಳೆಯಲಾರದು.

ಈ ಉದಾಹರಣೆ ನೀಡಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಖಾದಿಯಾನಿನ ಇಬ್ಬರು ವ್ಯಕ್ತಿಗಳಿಗೆ ಸಂಬಂಧಿಸಿ ಹೀಗೆ ವಿವರಿಸಿದರು: ಇಬ್ಬರು ಪರಸ್ಪರ ಭಿನ್ನಾಭಿಪ್ರಾಯ ಹೊಂದಿದ್ದರು. ಅವರಿಬ್ಬರಲ್ಲಿ ರಾಜಿ ಮಾಡಿಸಲು ಸ್ನೇಹಿತರು ಪ್ರಯತ್ನಿಸಿದರು. ಆದರೆ ಅವರಿಬ್ಬರೂ ಹೇಳಿದರು: ನಾವು ನ್ಯಾಯಾಲಯಕ್ಕೆ ಹೋಗುವೆವು. ಅಲ್ಲಿಂದ ತೀರ್ಪು ಪಡೆಯುವೆವು ಎಂದು. ಹಾಗೆ ಅವರಿಬ್ಬರೂ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸಿದರು. ಮೊಕದ್ದಮೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವಾಗ ಅವರು ಅಥವಾ ಅವರ ಪ್ರತಿನಿಧಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಬಂದು ತಮ್ಮ ಪರವಾಗಿ ಪ್ರಾರ್ಥಿಸಲು ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅವರಿಬ್ಬರೂ ನನ್ನ ಶಿಷ್ಯರಾಗಿದ್ದಾರೆ. ಅವರಿಬ್ಬರೊಂದಿಗೆ ನನ್ನ ಸಂಬಂಧವಿದೆ. ಯಾರು ಜಯಗಳಿಸಬೇಕು ಯಾರು ಸೋಲಬೇಕು ಎಂದು ನಾನು ಹೇಗೆ ತಾನೆ ಪ್ರಾರ್ಥಿಸಲು ಸಾಧ್ಯ? ಆದುದರಿಂದ ನಾನು ಹೀಗೆ ಪ್ರಾರ್ಥಿಸುತ್ತೇನೆ. ಯಾರು ಸತ್ಯವಂತನಾಗಿರುವನೋ ಅವನು ಜಯಗಳಿಸಲಿ ಎಂದು.

ನ್ಯಾಯ ಪಡೆಯಲು ನ್ಯಾಯಾಲಯಕ್ಕೆ ಹೋಗುವುದು ಅನುವದನೀಯವೇ ಆಗಿದೆ. ಆದರೆ ಸ್ನೇಹಿತರ ಮೂಲಕ ರಾಜಿ ಮಾಡಲು ಸಾಧ್ಯವಿದ್ದರೆ ಮತ್ತು ಮಧ್ಯಸ್ಥಿಕೆ ಮೂಲಕ ತೀರ್ಮಾನ ಆಗಲು ಸಾಧ್ಯವಿದ್ದರೆ, ಪರಸ್ಪರ ಕುಳಿತು ಮಾತುಕತೆ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿದ್ದರೆ ಅಂತಹ ಸಂದರ್ಭಗಳಲ್ಲಿ ನ್ಯಾಯಾಲಯಕ್ಕೆ ಹೋಗಬಾರದು. ಹಟಮಾರಿತನ ಸಹ ಹೊಂದಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಈ ರೀತಿಯ ಹಟಮಾರಿತನವನ್ನು ಇಷ್ಟಪಟ್ಟಿರಲಿಲ್ಲ. ಹಟಮಾರಿತನ ಒಳ್ಳೆಯದಲ್ಲ. ಆದುದರಿಂದ ಹಟಮಾರಿತನದಿಂದ ರಕ್ಷಣೆ ಪಡೆಯಲು ಪ್ರಯತ್ನಿಸಬೇಕು. ಪ್ರಾರ್ಥಿಸಲು ಹೇಳಿ ಇಮಾಮರನ್ನು ಸಹ ಕಷ್ಟಕ್ಕೆ ಗುರಿಮಾಡಬಾರದು. ವಾದಿ ಮತ್ತು ಪ್ರತಿವಾದಿ ಇಬ್ಬರೂ ಅಹ್ಮದಿಯಾಗಿದ್ದರೆ ಯಾರ ಪರವಾಗಿ ಪ್ರಾರ್ಥಿಸುವುದು ಮತ್ತು ಯಾರ ಬಗ್ಗೆ ಪ್ರಾರ್ಥಿಸದಿರುವುದು.

ಅಲ್ಲಾಹನು ನಮಗೆ ನೀಡಿರುವ ಆಜ್ಞೆಗಳಲ್ಲೊಂದು, ತಂದೆ ತಾಯಂದಿರನ್ನು ಗೌರವಿಸಬೇಕು ಎಂದಾಗಿದೆ. ಧರ್ಮಕ್ಕೆ ಸಂಬಂಧಿಸಿದ ವಿಷಯಗಳನ್ನು ಹೊರತು ಪಡಿಸಿ, ಅಲ್ಲಾಹನ ಆಜ್ಞೆಗಳಿಗೆ ಸಂಬಂಧಿಸಿ ದವುಗಳನ್ನು ಹೊರತು ಪಡಿಸಿ ಉಳಿದ ವಿಷಯಗಳಲ್ಲಿ ಅವರನ್ನು ಅನುಸರಿಸಬೇಕು ಮತ್ತು ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಸಲ್ಲಿಸ ಬೇಕು. ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳಾಗಿದ್ದರೆ, ನಿಶ್ಶಂಶಯವಾಗಿ ನೀವು ಹೀಗೆ ಹೇಳಬಹುದು: ನಾನು ನಿಮ್ಮನ್ನು ಗೌರವಿಸುತ್ತೇನೆ. ಆದರೆ ಅಲ್ಲಾಹನು ನೀಡಿದ ಆಜ್ಞೆಗಳಿಗೆ ಸಂಬಂಧಿಸಿ ನಿಮ್ಮ ಮಾತನ್ನು ಅಂಗೀಕರಿ ಸಲು ನನಗೆ ಕಷ್ಟವಿದೆ. ನಾನು ನಿಮ್ಮ ಮಾತನ್ನು ಒಪ್ಪದಿರಲು ನಿರ್ಬಂಧಿತನಾಗಿದ್ದೇನೆ ಎಂದು ಹೇಳಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪ್ರತಿಯೊಬ್ಬನು ತನ್ನ ತಂದೆ ತಾಯಂದಿರೊಂದಿಗೆ ಉತ್ತಮವಾಗಿ ವರ್ತಿಸುವುದು ಮತ್ತು ಅವರ ಯಾವುದೇ ಆಜ್ಞೆಯನ್ನು ಉಲ್ಲಂಘಿಸದಿರುವುದು ಅವನ ಕಡ್ಡಾಯ ಕರ್ತವ್ಯ ಆಗಿದೆ. ಆದರೆ ಅನೇಕ ಯುವಕರು ತಮ್ಮ ತಂದೆ ತಾಯಂದಿರಿಗೆ ಅರ್ಹವಾದ ಗೌರವ ನೀಡುವುದಿಲ್ಲ. ಅವರಿಗೆ ಸಲ್ಲಬೇಕಾದ ಹಕ್ಕುಗಳ ಬಗ್ಗೆ ಗಮನ ಹರಿಸುವುದಿಲ್ಲ. ಅವರಲ್ಲಿ ಯಾರಿಗಾದರೂ ಉತ್ತಮ

ಹುದ್ದೆ ದೊರೆತರೆ ತಮ್ಮ ಬಡವರಾದ ತಂದೆ ತಾಯಂದಿರನ್ನು ಭೇಟಿಯಾಗಲು ಸಹ ಅವರು ನಾಚಿಕೆ ಪಡುತ್ತಾರೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಮ್ಮೆ ಹೀಗೆ ಹೇಳಿದರು: ಕೆಲವು ಜನರು ಕೆಲವು ಮೌಲವಿಗಳ ಅಥವಾ ಭಾಷಣಕಾರರ ಭಾಷಣಗಳನ್ನು ಆಲಿಸಿ ಕೇವಲ ತಾತ್ಕಾಲಿಕ ರಸಾನುಭೂತಿ ಪಡೆಯಲು ಮಾತ್ರ ಆಲಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಹ ಹೇಳಿದ್ದರು, ನೀವು ಸಭೆಗಳಿಗೆ ಆಗಮಿಸುವಾಗ– ಇಂತಿಂಥವರ ಭಾಷಣ ಉತ್ತಮವಾಗಿದೆ ಅದನ್ನು ಆಲಿಸಬೇಕು ಎಂಬ ಯೋಚನೆ ಹೊಂದಿ ಬರಬಾರದು. ನೀವು ಯೋಚಿಸಬೇಕಾದುದು ಈ ಸಭೆಯಲ್ಲಿ ಯಾವ್ಯಾವ ವಿಷಯಗಳನ್ನು ಪ್ರಸ್ತಾಪಿಸಲಾಗುತ್ತಿದೆ ಅವುಗಳಿಂದ ಏನು ಪ್ರಯೋಜನ ಪಡೆಯಬಹುದು ಎಂಬುದರ ಬಗ್ಗೆಯಾಗಿದೆ. ಕೆಲವು ಜನರು ಭಾಷಣಕಾರರ ಪಾಂಡಿತ್ಯವನ್ನು ಅರಿತುಕೊಳ್ಳುವುದಿಲ್ಲ. ಅವರು ಭಾಷಣದ ವಿಷಯವನ್ನು ಸಹ ತಳಸ್ಪರ್ಶಿಯಾಗಿ ಅರಿತುಕೊಳ್ಳುವುದಿಲ್ಲ. ಅವರು ಭಾಷಣದ ಉದ್ದೇಶವನ್ನು ಮನವರಿಕೆ ಮಾಡದೆ ಕೇವಲ ತಾತ್ಕಾಲಿಕ ರಸಾನುಭೂತಿ ಮಾತ್ರ ಪಡೆಯುತ್ತಾರೆ. ಇದೇ ರೀತಿ ಕೆಲವು ಭಾಷಣಗಾರರು ಕೂಡ ತಾತ್ಕಾಲಿಕ ಭಾವಾವೇಶ ಉಂಟುಮಾಡಲು ಬಹಳ ಜೋರಾಗಿ ಭಾಷಣ ಮಾಡುತ್ತಾರೆ ಅಥವಾ ಹಾಗೆ ಭಾಷಣ ಮಾಡಲು ಪ್ರಯತ್ನಿಸುತ್ತಾರೆ. ಅವರು ವಿವಿಧ ರೀತಿಗಳಲ್ಲಿ ಧ್ವನಿಯೆತ್ತಿ ಮಾತನಾಡುತ್ತಾರೆ. ಜನರಲ್ಲಿ ಅಳು ಬರಿಸಲು ಪ್ರಯತ್ನಿಸುತ್ತಾರೆ. ಅವರು ತೋರಿಕೆಗಾಗಿ ಮಾತನಾಡುವವರಾಗಿದ್ದಾರೆ. ಇಂತಹ ಒಬ್ಬ ಭಾಷಣಗಾರನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ವಿವರಿಸುತ್ತಾರೆ: ಒಬ್ಬ ಭಾಷಣಗಾರ ಭಾಷಣ ಮಾಡಲು ಎದ್ದು ನಿಂತನು. ಅವನ ಭಾಷಣದ ವಿಷಯ ಅಳು ಬರಿಸುವಂತಹದಾಗಿತ್ತು. ಒಬ್ಬ ಕೃಷಿಕ ಆ ಭಾಷಣ ಕೇಳಲು ಅಲ್ಲಿಗೆ ಬಂದನು. ಆ ಭಾಷಣ ಆಲಿಸಿದವರಲ್ಲಿ ಯಾರ ಮೇಲೆಯೂ ಆ ಭಾಷಣ ಪ್ರಭಾವ ಬೀರಲಿಲ್ಲ. ಆದರೆ ಆ ಕೃಷಿಕ ಸ್ವಲ್ಪ ಹೊತ್ತಿನ ನಂತರ ಅಳಲು ಪ್ರಾರಂಭಿಸಿದನು. ಭಾಷಣ ಮಾಡುವವ ಗ್ರಹಿಸಿದ ನನ್ನ ಭಾಷಣದ ಕಾರಣ ಈ ಕೃಷಿಕ ಅಳುತ್ತಿದ್ದಾನೆ ಎಂದು. ತನ್ನ ಭಾಷಣ ಅವನ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದು ಜನರಿಗೆ ತೋರಿಸಲು ಆ ಭಾಷಣಗಾರ ಆ ಕೃಷಿಕನೊಂದಿಗೆ ಕೇಳಿದನು, ನೀನು ನನ್ನ ಭಾಷಣದ ಯಾವ ವಿಷಯದಿಂದ ಪ್ರಭಾವಿತನಾಗಿ ಅಳುತ್ತಿರುವೆ ಎಂದು ಕೇಳಿದನು. ಆ ಕೃಷಿಕ ಈ ರೀತಿ ಉತ್ತರ ನೀಡಿದ. ನಿನ್ನೆ ನನ್ನ ಎಮ್ಮೆಯ ಕರು ಇದೇ ರೀತಿ ಹಾರಿ ಹಾರಿ ಶಬ್ದ ಮಾಡಿ ಸತ್ತು ಹೋಯಿತು. ನಿಮ್ಮ ಧ್ವನಿಯನ್ನು ನಾನು ಆಲಿಸಿದಾಗ ನನಗೆ ಅದರ ನೆನಪಾಯಿತು. ಮತ್ತು ನಾನು ಅತ್ತುಬಿಟ್ಟೆನು. ಆ ಭಾಷಣಗಾರ ತನ್ನ ಭಾಷಣದ ಪ್ರಭಾವದಿಂದ ಆ ಕೃಷಿಕ ಅಳಲು ಪ್ರಾರಂಭಿಸಿದನೆಂದು ತಪ್ಪಾಗಿ ಗ್ರಹಿಸಿದ್ದನು. ನಮ್ಮ ವಿರೋಧಿಗಳಾದ ಮೌಲವಿಗಳು ಮಾಡುವ ಭಾಷಣಗಳನ್ನು ಆಲಿಸುವುದಾದರೆ ಅವರ ಭಾಷಣಗಳು ಸಹ ಇಂತಹ ಕೃತಕ ಧ್ವನಿಗಳಿಂದ ತುಂಬಿರುವುದನ್ನು ಕಾಣಬಹುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯ ಅಲ್ಲಾಹನು ನಮಗೆ ನೀಡಿದ್ದಾನೆ. ನಾವು ಹಾಗೆ ನಂಬದೆ ಇರುತ್ತಿದ್ದರೆ ಪೀರ್ ಜನರು ಪ್ರಾರಂಭಿಸಿದ ಧಾರ್ಮಿಕ ವಾಣಿಜ್ಯ ಮಳಿಗೆಗಳಲ್ಲಿ ನಾವು ಸಹ ಪ್ರಾಯಶಃ ಸಹಭಾಗಿಗಳಾಗುತ್ತಿದ್ದೆವು. ಆದುದರಿಂದ ನಾವು ಪವಿತ್ರ ಖುರ್‌ಆನ್ ಬಗ್ಗೆ ಗಾಢವಾಗಿ ಚಿಂತಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದ ತಫ್‌ಸೀರ್ (ವ್ಯಾಖ್ಯಾನ) ಗಳನ್ನು ಓದಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆದ ತಫ್‌ಸೀರ್ ಗಳನ್ನು ಸಹ ಓದಬೇಕು. ಪವಿತ್ರ ಖುರ್‌ಆನಿನ ಕೆಲವು ವಚನಗಳ ಬಗ್ಗೆ ಖಲೀಫರು ನೀಡಿದ ವಿವರಣೆಗಳನ್ನೂ ನೋಡಬೇಕು. ನಾವು ಸ್ವತಃ ಪವಿತ್ರ ಖುರ್‌ಆನಿನ ವಚನಗಳ ಬಗ್ಗೆ ಗಾಢವಾಗಿ ಚಿಂತಿಸಬೇಕು. ಪವಿತ್ರ ಖುರ್‌ಆನ್‌ನಿಂದ ಜ್ಞಾನದ ಅಂಶಗಳನ್ನು ಹುಡುಕಲು ಪ್ರಯತ್ನಿಸುತ್ತಾ ಇರಬೇಕು.

ಕೆಲವು ಜನರು ಭಾವಿಸುತ್ತಾರೆ, ನಾವು ಜ್ಞಾನಗಳಿಸಿದ್ದೇವೆ. ಇದು ಬಹಳ ಸಾಕು. ಬೇರೆ ಯಾವುದರ ಆವಶ್ಯಕತೆಯೂ ನಮಗೆ ಇಲ್ಲ ಯಾವುದೇ ಅನುಭವದ ಆವಶ್ಯಕತೆ ಇಲ್ಲ ಎಂದು ಯೋಚಿಸುತ್ತಾರೆ. ಆದರೆ ಒಬ್ಬನು ಕೇವಲ ಪುಸ್ತಕಗಳನ್ನು ಓದಿ ವೈದ್ಯನಾಗಲು ಪ್ರಯತ್ನಿಸುವುದಾದರೆ ಅದು ಅಸಾಧ್ಯವಾದ ಕೆಲಸವಾಗಿದೆ. ವೈದ್ಯಶಾಸ್ತ್ರ ಗ್ರಂಥಗಳನ್ನು ಓದುವುದರೊಂದಿಗೆ ಯೋಗ್ಯ ವೈದ್ಯರ ಎದುರಿಗೆ ರೋಗಿಗಳನ್ನು ಪರೀಕ್ಷಿಸುವುದು ಮತ್ತು ರೋಗ ನಿರ್ಣಯಿಸಿ ಚಿಕಿತ್ಸೆ ನಡೆಸುವುದು ಆವಶ್ಯಕವಾಗಿರುತ್ತವೆ. ವೈದ್ಯನಾದವನು ವೈದ್ಯ ಗ್ರಂಥಗಳನ್ನು ಓದುವುದರ ಜೊತೆಗೆ ನಿಷ್ಣಾತ ವೈದ್ಯರ ಮುಂದೆ ರೋಗಿಗಳ ರೋಗ ನಿರ್ಣಯದ ಅನುಭವ ಪಡೆಯುತ್ತಾನೆ. ಆದುದರಿಂದಲೇ ಡಾಕ್ಟರ್‌ಗಳಿಗೆ ಕಾಲೇಜುಗಳಲ್ಲಿ ಕಲಿಸುವಾಗ ಅವರಿಗೆ ಪ್ರಾಯೋಗಿಕ ತರಬೇತಿ ಸಹ ನೀಡಲಾಗುತ್ತಿದೆ. ನಿಷ್ಣಾತ ಡಾಕ್ಟರ್‌ಗಳು ಮೇಲ್ವಿಚಾರಕರಾಗಿರುತ್ತಾರೆ. ಹೀಗೆ ಮಾಡದಿದ್ದರೆ ಅನುಭವ ಜ್ಞಾನ ಸಿಗಲಾರದು ಮತ್ತು ವಿಷಯವನ್ನು ಪೂರ್ಣವಾಗಿ ಕಲಿತುಕೊಳ್ಳಲು ಸಾಧ್ಯವಾಗದು. ವಿದ್ಯಾಭ್ಯಾಸ ಮುಗಿಸಿದ ನಂತರ ಸಹ ಅನುಭವ ಗಳಿಸುವ ಆವಶ್ಯಕತೆ ಇರುತ್ತದೆ. ಆದುದರಿಂದ ಒಬ್ಬ ವೈದ್ಯನಿಗೆ ವೈದ್ಯ ಶಾಸ್ತ್ರದಲ್ಲಿ ಪರಿಣತಿ ಸಿಗುವುದು ಅನುಭವ ಜ್ಞಾನ ಸಿಗುವಾಗ ಆಗಿರುತ್ತದೆ. ಅನುಭವ ರಹಿತ ಜ್ಞಾನ ಪ್ರಯೋಜನಕರವಾಗಲಾರದು.

ಒಬ್ಬ ಅಹ್ಮದಿಯ ವಿಶ್ವಾಸವು ಸುರಕ್ಷಿತವಾಗಿರಬೇಕಾದರೆ ಅವನು ಜಮಾಅತಿನ ನಿಝಾಮ್‌ನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ಬಲಿಷ್ಠವಾದ ಸಂಬಂಧವನ್ನು ಹೊಂದಿರಬೇಕು. ಸಂಬಂಧವು ಕ್ರಮಬದ್ಧವಾಗಿರಬೇಕು. ಅವನು ದೂರ ವಾಸ ಮಾಡುತ್ತಾ ಇದ್ದರೂ ಕ್ರಮಬದ್ಧವಾದ ರೀತಿಯಲ್ಲಿ ಸಂಬಂಧವನ್ನು ಜೋಡಿಸುವವನಾಗಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಜಮಾಅತಿಗೆ ಸಂಬಂಧಿಸಿದ ವಿಷಯಗಳಲ್ಲಿ ವ್ಯಕಿಗಳು ಅಭಿವೃದ್ಧಿ ಹೊಂದಬೇಕಾದರೆ, ಅವರು ಜೀವಂತ ಸಂಬಂಧ ಹೊಂದಬೇಕಾದರೆ, ಅವರು ಜಮಾಅತಿನ ಬೇರಿನೊಂದಿಗೆ ಸಂಬಂಧವನ್ನು ಹೊಂದಬೇಕು. ಈ ಕಾಲದಲ್ಲಿ ಇದಕ್ಕಿರುವ ಅತ್ಯುತ್ತಮ ಮಾರ್ಗ ಜಮಾಅತಿನ ಪತ್ರಿಕೆಗಳಾಗಿವೆ. ಒಬ್ಬನು ದೂರದಲ್ಲಿ ಎಲ್ಲಿಯಾದರೂ ಕುಳಿತಿದ್ದರೂ ಅವನಿಗೆ ಜಮಾಅತಿನ ಪತ್ರಿಕೆಗಳು ತಲಪುತ್ತಾ ಇದ್ದರೆ ಅವನು ಜಮಾಅತಿನ ಸಮೀಪ ಕುಳಿತಿರುವವನ ಹಾಗೆಯೇ ಇರುತ್ತಾನೆ. ಇಂದಿನ ಕಾಲದಲ್ಲಿ ಅಲ್ಲಾಹನು ನಮಗೆ ಇನ್ನಷ್ಟು ಹೆಚ್ಚು ಸೌಲಭ್ಯಗಳನ್ನು ಒದಗಿಸಿದ್ದಾನೆ. ತರಬೇತಿಗಾಗಿಯೂ ಮತ್ತು ಖಿಲಾಫತ್‌ನೊಂದಿಗೆ ಬಲವತ್ತಾದ ಸಂಬಂಧವನ್ನು ಜೋಡಿಸಲಿಕ್ಕಾಗಿಯೂ ಪ್ರತಿಯೊಬ್ಬ ಅಹ್ಮದಿ ಎಂ.ಟಿ.ಎ. ಆಲಿಸುವ ಆವಶ್ಯಕತೆ ಇದೆ. ಇದರ ಅಭ್ಯಾಸ ಮಾಡಿಕೊಳ್ಳಬೇಕು. ತಬ್ಲೀಗ್ ಮಾಡಲು ಎಂ.ಟಿ.ಎ. ಮತ್ತು ವೆಬ್‌ಸೈಟ್ ಪ್ರೋಗ್ರಾಮ್‌ಗಳನ್ನು ಅನ್ಯರಿಗೆ ಸಹ ಕೇಳಿಸಬೇಕು. ಸ್ನೇಹಿತರೊಂದಿಗೆ ಕುಳಿತಿರುವಾಗ ಅವರಿಗೆ ಇವುಗಳ ಪರಿಚಯ ಮಾಡಿಸಿಕೊಡಬೇಕು.

ನನಗೆ ಅನೇಕ ಪತ್ರಗಳು ಬರುತ್ತಾ ಇವೆ. ನಾವು ಎಂ.ಟಿ.ಎ.ದಲ್ಲಿ ಖುತ್‌ಬಗಳನ್ನು ಕ್ರಮಬದ್ಧವಾಗಿ ಆಲಿಸಲು ಪ್ರಾರಂಭಿಸಿದಾಗ ಜಮಾಅತಿನೊಂದಿಗೆ ನಮ್ಮ ಸಂಬಂಧ ಬಲಿಷ್ಠಗೊಂಡಿತು. ನಮ್ಮ ವಿಶ್ವಾಸ ಬಲಿಷ್ಠವಾಯಿತು ಎಂದು ಬರೆಯುತ್ತಾರೆ. ಎಂ.ಟಿ.ಎ. ಮತ್ತು alislam ವೆಬ್‌ಸೈಟ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ತಬ್‌ಲೀಗನ್ನು ತಲುಪಿಸಲು ಉತ್ತಮ ಮಾರ್ಗವಾಗಿದೆ. ಹಾಗೂ ಇದು ಪ್ರತಿಯೊಬ್ಬ ಅಹ್ಮದಿಯನ್ನು ತರಬೇತಿಯೊಂದಿಗೆ, ಖಿಲಾಫತ್‌ನೊಂದಿಗೆ ಹಾಗೂ ಜಮಾಅತಿನೊಂದಿಗೆ ಜೋಡಿಸುವ ಮಾರ್ಗವೂ ಆಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಇವುಗಳೊಂದಿಗೆ ಸಂಬಂಧ ಜೋಡಿಸಬೇಕಾದುದು ಕಡ್ಡಾಯವಾಗಿದೆ.

ಇನ್ನು, ಕೆಲವು ಜನರು ತಾವು ಸುಧಾರಣೆ ಹೊಂದಬೇಕು ಮತ್ತು ಇಸ್ಲಾಮೀ ಆಜ್ಞೆಗಳನ್ನು ಪಾಲಿಸುವವರಾಗಬೇಕು ಮತ್ತು ವಿಶಿಷ್ಟವಾಗಿ ನಮಾಝ್‌ಗಳ ಬಗ್ಗೆ ಕ್ರಮ ಬದ್ಧವಾಗಿ ಅನುಷ್ಠಿಸಬೇಕೆಂದು ಬಯಸುವವರಾಗಿರುತ್ತಾರೆ. ಆದರೆ ಅವರು ಉದಾಸೀನರಾಗಿರುವ ಜನರೊಂದಿಗೆ ಸೇರಿಕೊಂಡು ಅವರು ಸಹ ಉದಾಸೀನರಾಗುತ್ತಾರೆ. ಈ ಪ್ರಭಾವ ಅವರ ಮೇಲೆ ಅವರಿಗೆ ತಿಳಿಯದೆ ಉಂಟಾಗುತ್ತದೆ. ಆದುದರಿಂದ ಧಾರ್ಮಿಕವಾಗಿ ಉತ್ತಮರಾಗಿರುವವರೊಂದಿಗೆ ಕ್ರಮ ಬದ್ಧವಾಗಿ ನಮಾಝ್ ಅನುಷ್ಠಿಸುವವರ ಜೊತೆಗೆ ಇರಲು ಪ್ರಯತ್ನಿಸಬೇಕು. ನಾನು ಖಾದಿಯಾನ್ ಮತ್ತು ರಬ್ವದಲ್ಲಿರುವ ಅಹ್ಮದಿಯರ ಗಮನ ಸೆಳೆಯಲು ಬಯಸುತ್ತೇನೆ. ಅಲ್ಲಿ ಸ್ವಲ್ಪ ಸ್ಥಳದಲ್ಲಿ ಹೆಚ್ಚು ಅಹ್ಮದಿಯರು ವಾಸವಾಗಿದ್ದಾರೆ. ಅಲ್ಲಿ ಮಸ್‌ಜಿದ್‌ಗಳು ಸಹ ಹತ್ತಿರ ಹತ್ತಿರದಲ್ಲಿವೆ. ಅಲ್ಲಿನ ಮಸ್‌ಜಿದ್‌ಗಳನ್ನು ಯಾವಾಗಲೂ ಜನನಿಬಿಡವನ್ನಾಗಿ ಮಾಡಬೇಕು. ಅದಲ್ಲದೆ ಜಮಾಅತ್ ನಿಝಾಮ್ ಬಗ್ಗೆ ತಪ್ಪು ಅಭಿಪ್ರಾಯಗಳನ್ನು ಹೊಂದಿದವರಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸಹ ಪ್ರಯತ್ನಿಸಬೇಕು. ಸಾಮಾನ್ಯವಾಗಿ ಪ್ರತಿಯೊಂದು ಸ್ಥಳದಲ್ಲಿ ಪ್ರತಿಯೊಬ್ಬ ಅಹ್ಮದಿ ಉದಾಸೀನರಾಗಿರುವವರೊಂದಿಗೆ ಸೇರುವುದರ ಬದಲಾಗಿ ಸಕ್ರಿಯರಾಗಿರುವವರೊಂದಿಗೆ ಸೇರಿ ಜಮಾಅತನ್ನು ಚುರುಕುಗೊಳಿಸಬೇಕು. ಚುರುಕಾಗಿರುವವರ ಸಂಖ್ಯೆ ವರ್ಧಿಸುವಾಗ ಉದಾಸೀನರಾದ ಜನರು ಸಹ ಚುರುಕಾಗಿ ವರ್ತಿಸುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಳಿಗೆ ಒಬ್ಬ ವ್ಯಕ್ತಿ ಬಂದು ಹೀಗೆ ಹೇಳಿದ. ನಾನು ಒಂದು ಅದ್ಭುತ ಕೃತ್ಯ ಕಾಣಲು ಬಯಸುತ್ತೇನೆ. ನೀವು ಒಂದು ಅದ್ಭುತ ಕೃತ್ಯ ಪ್ರಕಟಿಸಿದರೆ ನಾನು ನಿಮ್ಮನ್ನು ನಂಬಲು ಸಿದ್ಧನಾಗಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನನಗೆ ನೆನಪಿದೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವನೊಂದಿಗೆ ಹೇಳಿದರು: ಅಲ್ಲಾಹನು ಜಾದೂಗಾರನಲ್ಲ. ಅವನು ಯಾವುದೇ ತಮಾಷೆಯ ಆಟ ಆಡಿ ತೋರಿಸುವುದಿಲ್ಲ. ಅವನ ಪ್ರತಿಯೊಂದು ಕೆಲಸ ಜಾಣ್ಮೆಯಿಂದ ಕೂಡಿದೆ. ನೀವು ಹೇಳಿರಿ, ಇದರ ಮೊದಲು ಪ್ರಕಟಿಸಿದ ಅದ್ಭುತ ಕೃತ್ಯಗಳಿಂದ ನೀವು ಏನು ಪ್ರಯೋಜನ ಪಡೆದಿರಿ. ನಿಮಗೆ ಹೊಸದಾಗಿ ಅದ್ಭುತ ಕೃತ್ಯ ತೋರಿಸುವ ಅಗತ್ಯವೇನು? ಅಲ್ಲಾಹನು ಇಂತಹ ನಿರರ್ಥಕ ಆವಶ್ಯಕತೆಗಳಿಗೆ ಮಹತ್ವ ನೀಡುವುದಿಲ್ಲ. ಅದೇ ರೀತಿ ಪ್ರವಾದಿಗಳೂ ಮಹತ್ವ ನೀಡುವುದಿಲ್ಲ. ಅನೇಕ ದೃಷ್ಟಾಂತಗಳು ಪ್ರಕಟಗೊಂಡಿರುತ್ತವೆ. ಒಳ್ಳೆಯ ಪ್ರಕೃತಿ ಹೊಂದಿದವರಿಗೆ ನಂಬಲು ಅವುಗಳು ಸಾಕು.

ಲೌಕಿಕ ಕೆಲಸಗಳು ಪರಿಣಾಮ ನೀಡುವವುಗಳಾಗಿರುವಾಗ ನೈತಿಕ ಮತ್ತು ಆಧ್ಯಾತ್ಮಿಕ ಕೆಲಸಗಳು ಪರಿಣಾಮ ನೀಡಲಾರವು ಎಂದು ಭಾವಿಸಲು ಹೇಗೆ ತಾನೆ ಸಾಧ್ಯ. ಪ್ರಯತ್ನಗಳ ಬಗ್ಗೆ, ಕಷ್ಟಪಡುವ ಬಗ್ಗೆ ಹೇಳುವುದಾದರೆ ಪರಿಣಾಮಗಳು ನಮ್ಮ ಸ್ವಾಧೀನದಲ್ಲಿಯೇ ಇರುತ್ತವೆ. ಪರಿಣಾಮ ಉತ್ತಮವಾಗುವುದಿಲ್ಲವಾದರೆ ನಮ್ಮ ಕೆಲಸದಲ್ಲಿ ಏನೋ ಕೊರತೆಯಿದೆ ಎಂದು ಭಾವಿಸಿಕೊಳ್ಳಿರಿ. ಆದುದರಿಂದ ನಮ್ಮ ಪ್ರಯತ್ನದ ಪರಿಣಾಮ ನಮ್ಮೆದುರಿಗೆ ಸ್ಪಷ್ಟವಾಗಿ ಕಾಣಿಸುವ ರೀತಿಯಲ್ಲಿ ನಾವು ಕೆಲಸ ಮಾಡಲು ಪ್ರಯತ್ನಿಸಬೇಕು. ನಾವು ನಮ್ಮ ಕೆಲಸಗಳ ಪರಿಣಾಮವನ್ನು ಕಾಣುವ ತನಕ ಸುಖವಾಗಿ ಕುಳಿತುಕೊಳ್ಳಬಾರದು.

ಕೆಲವು ಜನರು ಬರೆಯುತ್ತಾರೆ, ನಾವು ಬಹಳ ಆರಾಧನೆ ಮಾಡಿದೆವು. ಬಹಳ ಪ್ರಾರ್ಥಿಸಿದೆವು. ಆದರೆ ನಮ್ಮ ಉದ್ದೇಶ ಈಡೇರಲಿಲ್ಲ, ನಮ್ಮ ಪ್ರಾರ್ಥನೆ ಅಂಗೀಕಾರ ಪಡೆಯಲಿಲ್ಲ ಎಂದು. ಅವರು ತಿಳಿದುಕೊಳ್ಳಬೇಕಾದುದೇನೆಂದರೆ ಒಂದೋ ಅವರು ಎಲ್ಲಿಯ ತನಕ ಹೋಗಬೇಕಾಗಿತ್ತೋ ಅಲ್ಲಿಯ ತನಕ ಅವರು ತಲಪಲಿಲ್ಲ. ಅಥವಾ ಅವರು ತಮ್ಮ ಗುರಿಯನ್ನು ನಿಶ್ಚಯಿಸಿದರು; ಆದರೆ ಅಲ್ಲಿಗೆ ತಲಪುವ ಸರಿಯಾದ ಮಾರ್ಗದಲ್ಲಿ ಚಲಿಸಲಿಲ್ಲ. ಆದುದರಿಂದ ಪ್ರಾರ್ಥಿಸುವವರು ತಿಳಿದಿರಬೇಕಾದುದೇನೆಂದರೆ ಮಾರ್ಗವು ಸರಿಯಾಗಿರಬೇಕು. ಅದೇ ರೀತಿ ಎಷ್ಟು ಕಷ್ಟಪಟ್ಟು ಪ್ರಯತ್ನಿಸಬೇಕೋ ಅದು ಸಹ ಪೂರ್ಣವಾಗಿರಬೇಕು. ಆಧ್ಯಾತ್ಮಿಕತೆ ಗಳಿಸಲು, ಅಲ್ಲಾಹನ ಸಾಮೀಪ್ಯ ಪಡೆಯಲು, ಪ್ರಾರ್ಥನೆಗಳು ಅಂಗೀಕಾರ ಗಳಿಸಲು ನಮ್ಮ ರೀತಿಗಳನ್ನು ನೋಡಬೇಕು. ನಮ್ಮ ಸುಧಾರಣೆ ಆಗಬೇಕು. ಅದನ್ನು ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ. ನಾವು ಯಾವ ರೀತಿ ಸುಧಾರಣೆ ಹೊಂದಿದ್ದೇವೆ ಎಂದು ಆತ್ಮ ಪರಿಶೋಧನೆ ನಡೆಸಬೇಕು. ನಮ್ಮ ಆರಾಧನೆಗಳನ್ನು ನೋಡುವ ಆವಶ್ಯಕತೆ ಇದೆ. ಅಲ್ಲಾಹನ ಎಲ್ಲಾ ಆಜ್ಞೆಗಳ ಪಾಲನೆಯ ಆವಶ್ಯಕತೆ ಇದೆ. ನಮ್ಮ ಪ್ರತಿಯೊಂದು ಕೆಲಸದ ಪರಿಶೋಧನೆ ಆವಶ್ಯಕವಾಗಿದೆ. ನಮ್ಮ ಕೆಲಸಗಳು ಹೇಗಿವೆ ಎಂದು ನೋಡಬೇಕಾಗಿದೆ. ನಮ್ಮ ಯೋಚನೆ ಮತ್ತು ಬುದ್ಧಿಯನ್ನು ಸರಿಪಡಿಸಬೇಕಾಗಿದೆ. ಅಲ್ಲಾಹನು "ನಾನು ಸಮೀಪವಾಗಿದ್ದೇನೆ. ನಾನು ದಾಸರ ಪ್ರಾರ್ಥನೆಗಳನ್ನು ಆಲಿಸುತ್ತೇನೆ" ಎಂದು ಹೇಳಿರುವಾಗ ಅವನು ನಮ್ಮ ಸಮೀಪ ಬರುವುದಿಲ್ಲವಾದರೆ, ನಮ್ಮ ಪ್ರಾರ್ಥನೆಗಳು ಆಲಿಸಲ್ಪಡುವುದಿಲ್ಲವಾದರೆ ನಮ್ಮ ಪ್ರಯತ್ನಗಳಲ್ಲಿ ಮತ್ತು ನಮ್ಮ ಸ್ಥಿತಿಗತಿಗಳಲ್ಲಿ ಕುಂದುಕೊರತೆ ಇದೆ ಎಂದು ತಿಳಿದುಕೊಳ್ಳಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು, ಭಿಕ್ಷುಕರು ಎರಡು ವಿಧಗಳಲ್ಲಿರುತ್ತಾರೆ. ಅವರಲ್ಲಿ 'ನರ್‌ಗದಾ' ಬಾಗಿಲಿಗೆ ಬಂದು ಬೇಡುತ್ತಾರೆ. ಯಾರಾದರೂ ಕೊಟ್ಟರೆ ತೆಗೆದುಕೊಳ್ಳುತ್ತಾರೆ. ಕೊಡದಿದ್ದರೆ ಮೂರು ಸಾರಿ ಕೂಗಿ ಹೇಳಿ ಮುಂದೆ ಹೋಗುತ್ತಾರೆ. ಆದರೆ ಇನ್ನೊಂದು ರೀತಿಯ ಬಿಕ್ಷುಕ (ಖರ್‌ಗದಾ) ತನಗೆ ಭಿಕ್ಷೆ ದೊರೆಯುವ ತನಕ ಮನೆ ಬಾಗಿಲಿನಿಂದ ದೂರ ಸರಿದು ಹೋಗುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರಾರ್ಥನೆ ಅಂಗೀಕಾರ ಪಡೆಯಲು ಮನುಷ್ಯನು ಅಲ್ಲಾಹನ ಸನ್ನಿಧಿಯಲ್ಲಿ ತನ್ನ ಪ್ರಾರ್ಥನೆ ಅಂಗೀಕಾರವಾಗುವ ತನಕ ಕುಳಿತುಕೊಳ್ಳಬೇಕು. ಆ ವಿಷಯದ ಬಗ್ಗೆ ಪ್ರಾರ್ಥಿಸಬೇಕಾಗಿಲ್ಲವೆಂದು ಅಲ್ಲಾಹನು ಸ್ವತಃ ಸೂಚನೆ ನೀಡುವ ತನಕ ಪ್ರಾರ್ಥಿಸುತ್ತಾ ಇರಬೇಕು. ಇನ್ನೊಂದು ವಿಷಯವೇನೆಂದರೆ ಯಾವಾಗಲೂ ಸ್ವಂತ ಪ್ರಯತ್ನವನ್ನು ಬಿಟ್ಟುಬಿಡಬಾರದು. ಪ್ರಾರ್ಥನೆಯೊಂದಿಗೆ ಸ್ವಂತ ಪ್ರಯತ್ನ ಸಹ ಆವಶ್ಯಕವಾಗಿದೆ. ಸ್ವಂತ ಪ್ರಯತ್ನ ಮತ್ತು

ಪ್ರಾರ್ಥನೆ ಸ್ಥಿರವಾಗಿ ಮಾಡುತ್ತಾ ಇರಬೇಕು. ಅದು ಅಲ್ಲಾಹನ ಅನುಗ್ರಹವನ್ನು ಸೆಳೆಯುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರಾರ್ಥನೆಯೊಂದಿಗೆ ಪ್ರಯತ್ನ ಮಾಡದಿರುವುದು ತಪ್ಪಾಗಿರುತ್ತದೆ. ಪ್ರಾರ್ಥನೆ ಮಾಡುವಾಗ ಅದರ ಜೊತೆ ಪ್ರಯತ್ನ ಮಾಡದವನ ಪ್ರಾರ್ಥನೆ ಅಂಗೀಕಾರವಾಗಲಾರದು. ಪ್ರಾರ್ಥನೆಯೊಂದಿಗೆ ಪ್ರಯತ್ನ ಮಾಡದಿರುವುದು ಅಲ್ಲಾಹನ ನಿಯಮಗಳ ಉಲ್ಲಂಘನೆಯಾಗಿದೆ. ಮತ್ತು ಅಲ್ಲಾಹನನ್ನು ಪರೀಕ್ಷಿಸುವುದಾಗಿದೆ. ದಾಸರು ಅಲ್ಲಾಹನನ್ನು ಪರೀಕ್ಷಿಸುವುದು ಅಲ್ಲಾಹನಿಗೆ ಶೋಭಾಯಮಾನವಲ್ಲ. ನಾವು ಸ್ಥಿರವಾಗಿ ನಮ್ಮ ಸ್ಥಿತಿ ಸುಧಾರಣೆ ಮಾಡುತ್ತಾ ಅವನ ಇಚ್ಛೆಗೆ ಅನುಸಾರವಾಗಿ ಎಲ್ಲ ಬಾಹ್ಯ ಪ್ರಯತ್ನಗಳೊಂದಿಗೆ ಪ್ರಾರ್ಥನೆ ಮಾಡುವವರಾಗಲು ಅಲ್ಲಾಹನು ನಮಗೆ ಭಾಗ್ಯ ನೀಡಲಿ – ಆಮೀನ್.

(ಖುತ್‌ಬದ ಕೊನೆಯಲ್ಲಿ ಹುಝೂರ್, ಮುಕರ್ರಮ್ ಖಮರ್ ಝಿಯಾ ಸಾಹೇಬ್, ಮುಕರ್ರಮ್ ಮುಹಮ್ಮದ್ ಅಲಿ ಸಾಹೇಬರ ಪುತ್ರ, ಕೋಟ್ ಅಬ್ದುಲ್ ಮಾಲಿಕ್ ಎಂಬಲ್ಲಿ 1–3–2016ರಂದು ಶತ್ರುಗಳಿಂದ ಶಹೀದ್ ಗೊಳಿಸಲ್ಪಟ್ಟ ಬಗ್ಗೆ ಪ್ರಸ್ತಾಪಿಸಿ ಅವರ ಸದ್ಗುಣಗಳ ಬಗ್ಗೆ ಮತ್ತು ಸೇವೆಗಳ ಬಗ್ಗೆ ವಿವರಿಸಿದರು. ನಮಾಝೆ ಜನಾಝ ಗಾಯಿಬ್ ಬಗ್ಗೆ ಪ್ರಕಟಿಸಿದರು).

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 04-03-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email*:** *khutuba.kannada@gmail.com*



**You can find all the Sermons archived at**: www.alislam.org/friday-sermon